ಶ್ರೀ ಪಿ.ಹೆಚ್. ಪೂಜಾರ್ : ಮಾನ್ಯ ಅಧ್ಯಕ್ಷರೆ, ಬಾಗಲಕೋಟೆ ಮತ್ತು ಇತರ ಗ್ರಾಮೀಣ ಪ್ರದೇಶ ಮುಳುಗಡೆಯ ಪ್ರಶ್ನೆಯಾಗಿದ್ದು, ಪುನರ್ವಸತಿ ಸಮಸ್ಯೆಗಳ ನಿವಾರಣೆಗಾಗಿ ಸಮಿತಿಯೊಂದನ್ನು ಸರ್ಕಾರ ರಚಿಸಿದ್ದು, ಆ ಸಮಿತಿಯು ಇದುವರೆಗೂ ಒಂದು ಸಭೆಯನ್ನೂ ಕರೆದಿಲ್ಲ. 15 ದಿವಸಗಳಿಗೊಮ್ಮೆ ಸಭೆ ಕರೆಯಬೇಕೆಂದು ಉದ್ದೇಶವಿದ್ದರೂ, 7 ತಿಂಗಳಾದರೂ ಒಂದು ಸಭೆ ಕರೆದಿಲ್ಲ. ಇದರ ಬಗ್ಗೆ ಸರ್ಕಾರ ಗಮನಹರಿಸುತ್ತದೆಯೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಮಾನ್ಯ ಅಧ್ಯಕ್ಷರೆ, ಪ್ರಥಮ ಸಭೆಯನ್ನು ಅಲ್ಲಿನ ಜಿಲ್ಲಾ ಉಸ್ತುವಾರಿ ಸಚಿವರು ಕರೆದಿದ್ದಾರೆ. ಸಭೆಯ ದಿನಾಂಕವನ್ನೂ ಸಹ ಅವರೇ ನಿಗದಿಪಡಿಸುತ್ತಾರೆ. ಸಭೆ ಕರೆಯುವುದಕ್ಕೆ ನಾನು ಏರ್ಪಾಡು ಮಾಡಿಸುತ್ತೇನೆ. ಈಗಾಗಲೇ ಅದರ ಬಗ್ಗೆ ಕೂಲಂಕಷವಾಗಿ, ವಿವರವಾಗಿ ಮಾನ್ಯ ಹೆಚ್.ಕೆ. ಪಾಟೀಲರು ಉತ್ತರಿಸಿದ್ದು, ಮಾನ್ಯ ಅಧ್ಯಕ್ಷರು ಪುನಃ ಅದೇ ಪ್ರಶ್ನೆಯನ್ನು ಕೇಳುತ್ತಿದ್ದಾರೆ.

ಅಂಗನವಾಡಿ ಕೇಂದ್ರಗಳು

556 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು ?

ಆ) ಹೊಸ ಅಂಗನವಾಡಿ ಕೇಂದ್ರಗಳನ್ನು ತೆರೆಯಲಾಗುವುದೇ?

ಇ) ಹಾಗಿದ್ದಲ್ಲಿ, ಎಂದಿನಿಂದ ತೆರೆಯಲಾಗುವುದು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) 40170 ಕೇಂದ್ರಗಳಿವೆ.

ಆ) ಹೊಸದಾಗಿ ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ತೆರೆಯಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಇ) ಕೇಂದ್ರ ಸರ್ಕಾರವು ಸಂಪನ್ಮೂಲ ಕೊರತೆಯಿಂದ ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ಹಾಲಿ ಮಂಜೂರು ಮಾಡಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದೆ.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೆ, ನಾನು ಕೇಳಿದ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರಿಸಿದ್ದಾರೆ. ಆದರೆ, ಎಷ್ಟು ವರ್ಷಗಳಿಂದ ಅಂಗನವಾಡಿ ಕೇಂದ್ರಗಳನ್ನು ಕೇಂದ್ರ ಸರ್ಕಾರದವರು ಹೆಚ್ಚು ಮಾಡಿಲ್ಲ? ಮತ್ತು ಅದಕ್ಕಾಗಿ ಎಷ್ಟು ಬೇಡಿಕೆಗಳು ರಾಜ್ಯ ಸರ್ಕಾರದ ಮುಂದಿದೆ ಎನ್ನುವ ಬಗ್ಗೆ ಸಹ ಅವರು ತಿಳಿಸಿಲ್ಲ. ಅನೇಕ ಜಿಲ್ಲೆಗಳಲ್ಲಿ ಎಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹರಿಜನ-ಗಿರಿಜನರಿದ್ದರೋ, ಆ ಕೇರಿಗಳಲ್ಲಿ ಇನ್ನೂ ಅಂಗನವಾಡಿ ಕೇಂದ್ರಗಳ ಕೊರತೆ ಇದೆ. ಕೊನೆಯಪಕ್ಷ ಅಂಗನವಾಡಿ ಕೇಂದ್ರಗಳ ಮೂಲಕ ಆ ಮಕ್ಕಳಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ಒಂದು ಅನುಕೂಲ ಮಾಡಿಕೊಡುತ್ತಾರೆಯೇ? ಈ ವರ್ಷ ಏನಾದರೂ ಮಂಜೂರಾತಿ ಮಾಡಿ ಕೊಡುತ್ತಾರೆಯೇ?

ಶ್ರೀಮತಿ ಮೋಟಮ್ಮ : ನಾವು 4-5 ವರ್ಷಗಳಿಂದ ಕೇಂದ್ರದವರ ಮುಂದೆ ಈ ಬೇಡಿಕೆಗಳನ್ನು ಇಡುತ್ತಾ ಬಂದಿರುತ್ತೇವೆ. ನಮ್ಮ ರಾಜ್ಯದಲ್ಲಿ ಸುಮಾರು 6,685 ಕೇಂದ್ರಗಳನ್ನು ಹೆಚ್ಚುವರಿಯಾಗಿ ಕೊಡಬೇಕೆಂದು ಮನವಿ ಮಾಡಿಕೊಂಡಿದ್ದೇವೆ. ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ರಾಜ್ಯದಲ್ಲಿ ತೆರೆಯಲಿಕ್ಕೆ ಸಾಧ್ಯವಿಲ್ಲ ಏಕೆಂದರೆ, ಹಣಕಾಸಿನ ಕೊರತೆಯಿದೆ ಎಂದು ಅವರು ದಿನಾಂಕ : 30-3-2000ರ ಪತ್ರದಲ್ಲಿ ತಿಳಿಸಿರುತ್ತಾರೆ. ನಮ್ಮಲ್ಲಿ ನಲವತ್ತು ಸಾವಿರ ಅಂಗನವಾಡಿ ಕೇಂದ್ರಗಳು ಈಗಾಗಲೇ ಜಾರಿಯಲ್ಲಿವೆ.

ಶ್ರೀ ಕರಿಯಣ್ಣ : ಮಾನ್ಯ ಸಚಿವರು ಹೆಚ್ಚುವರಿಯಾಗಿ ಅಂಗನವಾಡಿ ಕೇಂದ್ರಗಳನ್ನು ತೆರೆಯಲಿಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳಿದರು. ಆದರೆ, ನಾವು ರಾಜ್ಯದಲ್ಲಿ ಸಾಕ್ಷರತೆ ಹೆಚ್ಚು ಮಾಡಬೇಕು, ಎಲ್ಲರಿಗೂ ಅಕ್ಷರ ಕಲಿಸಬೇಕು ಎಂದು ಹಳ್ಳಿಹಳ್ಳಿಯ ಬೀದಿಬೀದಿಗಳಲ್ಲಿ ಪ್ರಚಾರ ಮಾಡುತ್ತಿದ್ದೇವೆ. ಮಕ್ಕಳನ್ನು ಶಾಲೆಗೆ ಕಳುಹಿಸಲಿಕ್ಕೆ ಅಂಗನವಾಡಿ ಕೇಂದ್ರಗಳು ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಏಕೆಂದರೆ, ನನ್ನ ಮೀಸಲು ಕ್ಷೇತ್ರದಲ್ಲಿ ಹರಿಜನ-ಗಿರಿಜನರ ಕೇರಿಗಳಲ್ಲಿ ಅನೇಕ ಕಡೆ ಅಂಗನವಾಡಿ ಕೇಂದ್ರಗಳು ಇಲ್ಲದೇ ಇರುವುದರಿಂದ ಮಕ್ಕಳು ಶಾಲೆಗೆ ಹೋಗತಕ್ಕಂಥ ಪರಿಸ್ಥಿತಿ ಸೃಷ್ಟಿಯಾಗುತ್ತಿಲ್ಲ. ಇದರ ಜೊತೆಗೆ ಶಾಲೆಯನ್ನು ತೊರೆಯುವ ಮಕ್ಕಳಿಗಾಗಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಅದಕ್ಕೂ ಕೂಡ ದುಡ್ಡು ಖರ್ಚ ಮಾಡುತ್ತೇವೆ. ಇದರ ಬದಲಾಗಿ ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿಯೇ ಶಾಲೆಗೆ ಹೋಗತಕ್ಕಂಥ ರೂಢಿಯನ್ನು ಕಲಿಸಲಿಕ್ಕೆ ಈಗ ಅಂಗನವಾಡಿ ಕೇಂದ್ರಗಳು ಬಹಳ ಪ್ರಾಮುಖ್ಯವಾಗಿದ್ದು, ಹೀಗಾಗಿ ರಾಜ್ಯ ಸರ್ಕಾರದ ವತಿಯಿಂದಾದರೂ ಕೆಲವು ಅಂಗನವಾಡಿ ಕೇಂದ್ರಗಳನ್ನು ತೆರೆಯುವುದಕ್ಕೆ ಮಾನ್ಯ ಮಂತ್ರಿಗಳು ಏನಾದರೂ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಾರೆಯೇ ?

ಶ್ರೀಮತಿ ಮೋಟಮ್ಮ : ಕೇಂದ್ರ ಸರ್ಕಾರದಿಂದ ನಡೆಯುವ ಈ ಅಂಗನವಾಡಿಯ ಕೇಂದ್ರಗಳನ್ನು ತೆರೆಯಲಿಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ನಾನು ಈಗಾಗಲೇ ಹೇಳಿದೆ. ನಾವು ಶಿಶು ಪಲನಾ ಕೇಂದ್ರಗಳನ್ನು ತೆರೆಯುವುದಕ್ಕೆ ಸಾಧ್ಯವಿದೆ. ಒಂದು ವರ್ಷದಿಂದ ಮೂರು ವರ್ಷದ ಮಗುವಿಗಾಗಿ, ಪೌಷ್ಟಿಕ ಆಹಾರ, ಆರೋಗ್ಯ ತಪಾಸಣೆ, ಇಂಥ ಕೆಲಸಗಳನ್ನು ಈ ಕೇಂದ್ರದಲ್ಲಿ ಮಾಡುವುದಕ್ಕೆ ಒಂದು ಮಗುವಿಗೆ ಐದು ರೂಪಾಯಿಗಳನ್ನು ಕೊಡುತ್ತೇವೆ. ಇವುಗಳನ್ನು ನಾವು ಅಂಗನವಾಡಿಯ ರೀತಿಯಲ್ಲಿ ನೇರವಾಗಿ ಮಂಜೂರು ಮಾಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರು ಯಾವುದೇ ಒಂದು ಎನ್.ಜಿ.ಓ. ಇದ್ದರೆ ಅದು ಕೇವಲ ಹೆಣ್ಣು ಮಕ್ಕಳು ನಡೆಸುವಂಥ ಸಂಘ, ಸಂಸ್ಥೆ ಆಗಿದ್ದರೆ ಅಂಥ ಸಂಸ್ಥೆಯ ಕಡೆಯಿಂದ ಅರ್ಜಿ ಹಾಕಿಸಿದರೆ ಕೊನೆಯ ಪಕ್ಷ ಎಲ್ಲಿ ಅಗತ್ಯವಿದೆಯೋ ಅಂಥ ಕಡೆ ಇಂಥ ಶಿಶುಪಾಲನಾ ಕೇಂದ್ರಗಳನ್ನು ತೆರೆಯುವುದಕ್ಕೆ ಸಾಧ್ಯವಾಗಬಹುದು. ಆದ್ದರಿಂದ, ಮಾನ್ಯ ಸದಸ್ಯರು ಈ ದೃಷ್ಟಿಯಲ್ಲಿ ವಿಚಾರ ಮಾಡಿ ಯಾವುದಾದರೂ ಒಂದು ಒಳ್ಳೆಯ ಎನ್.ಜಿ.ಓ. ಕಡೆಯಿಂದ ಅರ್ಜಿ ಹಾಕಿಸಿ ಈ ಅನುಕೂಲ ಪಡೆದುಕೊಳ್ಳಬಹುದೆಂದು ನಾನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಇಲ್ಲಿಗೆ ಮುಗಿಯಿತು, ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.